ಕರ್ನಾಟಕ ವಿಧಾನ ಸಭೆ

849

ಶ್ರೀ ವಸಂತಬಂಗೇರ ಕೆ

ಅ) ದಿನಾಂಕ 01.04.2010 ರಿಂದ ಈವರೆಗೆ ರಾಜ್ಯದಲ್ಲಿ ಒಟ್ಟು ಎಷ್ಟು ಬಿಪಿಎಲ್ ಪಡಿತರ ಚೀಟಿಗಳನ್ನು ಕುಟುಂಬಗಳ ಆದಾಯ ಹಚ್ಚಾಗಿದೆ ಎಂದು ರದ್ದು ಪಡಿಸಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಆ) ಅರ್ಹ ಬಡ ಕುಟುಂಬಗಳ – ಪಡಿತರ ಚೀಟಿಯನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ತಾವು ಅರ್ಹ ಬಡ ಕುಟುಂಬವೆಂದು, – ಪಡಿತರ ಚೀಟಿಯನ್ನು ಮತ್ತೆ ನೀಡಬೇಕೆಂದು ಅರ್ಜಿ ಸಲ್ಲಿಸಲಿರುವ ಕುಟುಂಬಗಳ ಸಂಖ್ಯೆ ಎಷ್ಟು?

**ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.**

ಅ) ದಿನಾಂಕ : 1.4.2010ರ ನಂತರ ರಾಜ್ಯದಲ್ಲಿ ಯಾವುದೇ ಪಡಿತರ ಚೀಟಿಯನ್ನು ಕುಟುಂಬದ ಆದಾಯ ಹೆಚ್ಚಾಗಿದೆ ಎನ್ನುವ ಕಾರಣಕ್ಕಾಗಿ ರದ್ದುಪಡಿಸಲಾಗಿರುವುದಿಲ್ಲ. ಆದ ಕಾರಣ ವಿವರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಳೆದ ಒಂದು ವರ್ಷದಲ್ಲಿ 12,27,823 (ದಿನಾಂಕ : 21.07.2012ರವರೆಗೆ) ಅನರ್ಹ – ಕಾರ್ಡುಗಳನ್ನು ವಾರಸುದಾರರು ಇಲ್ಲದ ಕಾರಣಕ್ಕಾಗಿ ಅಥವಾ ಒಂದು ಕುಟುಂಬದ ಬಳಿ ಇನ್ನೊಂದು – ಕಾರ್ಡು ಇದೆ ಎನ್ನುವ ಕಾರಣಕ್ಕಾಗಿ ರದ್ದುಪಡಿಸಲಾಗಿದೆ.

ಆ) ಯಾವುದೇ ಅರ್ಹ ಬಡ ಕುಟುಂಬದ – ಕಾರ್ಡನ್ನು ಕುಟುಂಬ ಅಸ್ತಿತ್ವದಲ್ಲಿರುವ ಬಗ್ಗೆ ಮಾಹಿತಿ ಒದಗಿಸಿದ ನಂತರ, ರದ್ದುಪಡಿಸಲಾಗಿರುವುದಿಲ್ಲ.

ಇ) ಅಂತಹ ಕುಟುಂಬಗಳ ಮಾಹಿತಿ ಲಭ್ಯವಿರುವುದಿಲ್ಲ. – ಪಡಿತರ ಚೀಟಿ ಹೊಂದಿ ಅಸ್ತಿತ್ವದ ಬಗ್ಗೆ ಮಾಹಿತಿ ನೀಡದೆ ಪಡಿತರ ಚೀಟಿ ರದ್ದಾಗಿದ್ದಲ್ಲಿ, ಮಾಹಿತಿಯನ್ನು ಕಂಪ್ಯೂಟರ್‌ಗೆ ದಾಖಲು ಮಾಡಿದ ಕೂಡಲೇ ಮತ್ತೆ ಸಕ್ರಮಗೊಳ್ಳುತ್ತದೆ.

ಸಂ: ಆನಾಸ 245 ಡಿಆರ್‌ಎ 2012

(ಡಿ.ಎನ್. ಜೀವರಾಜ್)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು